**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ಇವರು ದಿನಾಂಕ:23.07.2024 ರಂದು ವಿಧಾನ ಪರಿಷತ್ತಿನಲ್ಲಿ ಶೂನ್ಯ ವೇಳೆಯ ಅಡಿಯಲ್ಲಿ ಪ್ರಸ್ತಾಪಿಸಿದ್ದ ವಿಷಯದ ಬಗ್ಗೆ ಉತ್ತರ:**

**ಪ್ರಶ್ನೆ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳು ನಿರ್ಮಾಣ ಹಂತದಲ್ಲಿದ್ದು ಬಿಲ್ ಪಾವತಿಗೆ ಬಾಕಿ ಇರುವ ಬಗ್ಗೆ.

**ಉತ್ತರ:**

ರಾಜೀವ್ ಗಾಂಧಿ ವಸತಿ ನಿಗಮದಿಂದ ವಸತಿರಹಿತರಿಗೆ ವಸತಿ ಸೌಕರ್ಯವನ್ನು ಒದಗಿಸಲು ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ರಾಜ್ಯ ಪುರಸ್ಕೃತ ವಸತಿ ಯೋಜನೆಗಳು:**

1. ಬಸವ ವಸತಿ ಯೋಜನೆ
2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ(ಗ್ರಾಮೀಣ & ನಗರ)
3. ದೇವರಾಜು ಅರಸು ವಸತಿ ಯೋಜನೆ(ಗ್ರಾಮೀಣ & ನಗರ)
4. ವಾಜಪೇಯಿ ನಗರ ವಸತಿ ಯೋಜನೆ
5. ಮುಖ್ಯಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆ(ಬೆಂಗಳೂರು ನಗರದಲ್ಲಿ ಮಾತ್ರ)

**ಕೇಂದ್ರ ಪುರಸ್ಕೃತ ವಸತಿ ಯೋಜನೆಗಳು:**

1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)
2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)

**ವಸತಿ ಮಂಜೂರಾತಿ ಹಾಗೂ ಅನುದಾನ ಬಿಡುಗಡೆ ವಿವರ:**

ಕಳೆದ ಮೂರು ವರ್ಷಗಳಲ್ಲಿ ಅಂದರೆ 2021-22 ರಿಂದ 2023-24ರವರೆಗೆ ವಿವಿಧ ವಸತಿ ಯೋಜನೆಗಳಡಿ ಉತ್ತರ ಕನ್ನಡ ಜಿಲ್ಲೆಗೆ 20,750 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಮಂಜೂರು ಮಾಡಲಾದ ಮನೆಗಳಿಗೆ ಈವರೆಗೆ ರೂ.19644.62 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಯೋಜನಾವಾರು ವಿವರಗಳನ್ನು ಕೆಳಗೆ ನೀಡಿದೆ.

**(ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆ | ಮಂಜೂರು ಮಾಡಲಾದ ಮನೆಗಳು | ಫಲಾನುಭವಿಗಳಿಗೆ ಬಿಡುಗಡೆ ಮಾಡಲಾದ ಮೊತ್ತ |
|---|---|---|---|
| 1. | ಬಸವ ವಸತಿ ಯೋಜನೆ | 16699 | 7798.18 |
| 2. | ದೇವರಾಜು ಅರಸು ವಸತಿ ಯೋಜನೆ(ಗ್ರಾ) | 1 | 0.00 |
| 3. | ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ(ಗ್ರಾ) | 2006 | 1783.99 |
| 4. | ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ(ನ) | 113 | 3348.67 |
| 5. | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 790 | 723.61 |
| 6. | ಪ್ರಧಾನ ಮಂತ್ರಿ ಆವಾಸ್ ಯೋಜನೆ(ನ) | 510 | 5274.29 |
| 7. | ವಾಜಪೇಯಿ ನಗರ ವಸತಿ ಯೋಜನೆ | 631 | 715.88 |
| **ಒಟ್ಟು** | | **20750** | **19644.62** |

ಆಯವ್ಯಯದಲ್ಲಿ ನಿಗಧಿಪಡಿಸಲಾಗುವ ಅನುದಾನವನ್ನು ತ್ರೈಮಾಸಿಕವಾರು ಬಿಡುಗಡೆ ಮಾಡಿ ವಿವಿಧ ವಸತಿ ಯೋಜನೆಗಳಡಿ ಅನುಮೋದನೆಗೊಂಡು ನಿರ್ಮಾಣ ಹಂತದಲ್ಲಿರುವ ಮನೆಗಳಿಗೆ ಅರ್ಹ ಫಲಾನುಭವಿಗಳ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗನುಸಾರ ಅನುದಾನದ ಲಭ್ಯತೆಗೆ ಅನುಗುಣವಾಗಿ ನೇರವಾಗಿ ಫಲಾನುಭವಿಗಳ ಆಧಾರ್ ಜೋಡಣೆಗೊಂಡ ಬ್ಯಾಂಕ್ ಖಾತೆಗಳಿಗೆ ಅನುದಾನವನ್ನು ರಾಜೀವ್ನ ಗಾಂಧಿ ವಸತಿ ನಿಗಮದ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

ಪ್ರಸ್ತುತ ಬಸವ ವಸತಿ ಯೋಜನೆ ಮತ್ತು ಡಿ. ದೇವರಾಜ ಅರಸು ವಸತಿ ಯೋಜನೆಗಳನ್ನು ಹೊರತುಪಡಿಸಿ ಯಾವುದೇ ವಸತಿ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಯಾವುದೇ ಬಾಕಿ ಇರುವುದಿಲ್ಲ.

ಬಸವ ವಸತಿ ಯೋಜನೆಯಡಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅನುಮೋದನೆಗೊಂಡ 64810 ಮನೆಗಳಲ್ಲಿ ಪ್ರಗತಿಯಲ್ಲಿರುವ 4733 ಮನೆಗಳಿಗೆ ರೂ.1797.76 ಲಕ್ಷಗಳ ಅನುದಾನ ಹಾಗೂ ಡಿ. ದೇವರಾಜ ಅರಸ್ ವಸತಿ ಯೋಜನೆಯಡಿಯಲ್ಲಿ ಅನುಮೋದನೆಗೊಂಡ 2016 ಮನೆಗಳಲ್ಲಿ ಪ್ರಗತಿಯಲ್ಲಿರುವ 42 ಮನೆಗಳಿಗೆ ರೂ.14.26 ಲಕ್ಷಗಳ ಅನುದಾನ ಬಿಡುಗಡೆಗೆ ಬಾಕಿ ಇರುತ್ತದೆ.

ಬಸವ ವಸತಿ ಯೋಜನೆಯಡಿ ಮತ್ತು ಡಿ ದೇವರಾಜ ಅರಸು ವಸತಿ ಯೋಜನೆಯಡಿ ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಆರ್ಥಿಕ ಇಲಾಖೆಯು ಅನುದಾನ ಒದಗಿಸಿದ ಕೂಡಲೇ ಫಲಾನುಭವಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಸಂ:ವಇ 364 ಹೆಚ್‌ಎಂ 2024

(ಬಿ.ಜೆಡ್. ಜಮೀರ್‌ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು